ಜಾರಿ ನಂ.5/2015

ಒ.ಡಬ್ಲೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು

ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 22-11-2019

**ಮುಂದುವರೆದ ಮುಖ್ಯ ವಿಚಾರಣೆಃ-** ಶ್ರೀ ಸಿ.ವಿ.ಪಿ ವಕೀಲರಿಂದ

ಅರ್ಜಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಉದ್ದಿಮೆ ಪರವಾನಿಗೆ ನಿ.ಒ-7 ಎಂದು, ರಶೀದಿ ನಿ.ಒ-8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ವೈಕೆ.ಪಿ ವಕೀಲರಿಂದ**

ನನ್ನ ತಂದೆ 1994-95 ನೇ ಸಾಲಿನಲ್ಲಿ ಚನ್ನರಾಯಪಟ್ಟಣ ಪುರಸಭೆಯಲ್ಲಿ ಅಧ್ಯಕ್ಷರಾಗಿದ್ದರು. ನಮ್ಮ ತಂದೆಗೆ ನಾನು ಎರಡನೇ ಮಗ. ಪ್ರಸ್ತುತ ಜಾರಿ ಕೇಸಿನಲ್ಲಿರುವ ಮಳಿಗೆ ಬಗ್ಗೆ ಹಿಂದೆ ಏನೆಲ್ಲಾ ವ್ಯವಹಾರಗಳು ನಡೆದಿವೆ ನನಗೆ ಗೊತ್ತಿದೆ. ಈ ಮಳಿಗೆಯಲ್ಲಿ ನಾನು ಮೆಡಿಕಲ್ ಶಾಪ್ ಇಟ್ಟುಕೊಂಡಿದ್ದು, ನನ್ನ ಚಿಕ್ಕಪ್ಪನ ಮಗ ಸಂದೀಪ್ ಪಾಲುದಾರರು, ನಮ್ಮ ಜೊತೆಗೆ ಒಬ್ಬರು ಫಾರ್ಮಾಸಿಸ್ಟ್ ಇಟ್ಟುಕೊಂಡಿದ್ದೆವು ಅವರ ಹೆಸರು ನೆನಿಪಿರುವುದಿಲ್ಲ. ಅವರ ಹೆಸರು ಬಿ.ಎಸ್. ಪ್ರವೀಣ್ ಕುಮಾರ್ ಎಂದರೆ ನೆನಪಿಲ್ಲ. ಈ ಮಳಿಗೆ ಹಿಂದೆ ಪುರಸಭಾ ಸಂಖ್ಯೆ 17 ರಲ್ಲಿದ್ದು, ಈಗ 16 ಆಗಿದೆ ಎಂದರೆ ಸರಿಯಲ್ಲ. ಈ ಮಳಿಗೆಯನ್ನು ನಾನು ರಾಜೇಗೌಡ ಎಂಬುವವರಿಂದ ಜಿ.ಪಿ.ಎ ಮೂಲಕ ಪಡೆದಿದ್ದೆ, ಸದರಿ ಜಿ.ಪಿ.ಎ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಜಿ.ಪಿ.ಎ ಯನ್ನು ಯಾರ ಮುಂದೆ ಬರೆಸಿಕೊಟ್ಟಿದ್ದರು ನೆನಪಿರುವುದಿಲ್ಲ. ಆ ಕಾಲಕ್ಕೆ ಯಾರು ಯಾರು ಸಾಕ್ಷಿದಾರರು ಇದ್ದರು ನೆನಪಿರುವುದಿಲ್ಲ. ಜಿ.ಪಿ.ಎ ಮಾಡಿದ ದಿನಾಂಕ ಹೇಳಲಾಗುವುದಿಲ್ಲ. ಜಿ.ಪಿ.ಎ ನಲ್ಲಿರುವ ಷರತ್ತು ಮತ್ತು ನಿಬಂಧನೆಗಳು ನೆನಪಿಲ್ಲ. ಪ್ರಸ್ತುತ ಈ ಮಳಿಗೆಯಲ್ಲಿ ನಾನು ಮೆಡಿಕಲ್ ಶಾಪ್ ನಡೆಸುತ್ತಿಲ್ಲ, ಖಲ್ಲಾ ಮಾಡಿದ್ದೇನೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆ ಈ ಮಳಿಗೆಯಲ್ಲಿ ಸ್ವಲ್ಪ ಜಾಗ ಹೋಗಿದೆ ಎಂದರೆ ಸರಿ. ಸದರಿ ಮಳಿಗೆ 16 ಅಡಿ ಅಗಲ, 18 ಅಡಿ ಉದ್ದ ಇದ್ದು, ಈಗ 6-7 ಅಡಿ ರಸ್ತೆ ಅಗಲೀಕರಣಕ್ಕೆ ಹೋಗಿದೆ. ಪ್ರಸ್ತುತ ಉಳಿದ ಮಳಿಗೆಯಲ್ಲಿ ಮೊಬೈಲ್ ಅಂಗಡಿಯನ್ನು ನಾನೊಬ್ಬನೇ, ಭೈರವೇಶ್ವರ ಮೊಬೈಲ್ ಪಾಯಿಂಟ್ ಎಂಬ ನಾಮಾಂಕಿತದೊಂದಿಗೆ ನಡೆಸುತ್ತಿದ್ದೇನೆ.

ನಮ್ಮ ಅಂಗಡಿಯಲ್ಲಿ ಕಿರಣ್ ಎಂಬುವವರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿ.ಒ-1 ರಿಂದ 8 ರವರೆಗಿನ ದಾಖಲೆಗಳನ್ನು ನನ್ನ ತಂದೆ ನನಗೆ ನೀಡಿರುತ್ತಾರೆ. ಸದರಿ ದಾಖಲೆಗಳಲ್ಲಿರುವ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ, ನನ್ನ ತಂದೆಗೆ ಗೊತ್ತಿದೆ. ನಾನು ಬಾಡಿಗೆ ಕಟ್ಟುತ್ತಿಲ್ಲ. ನಿಒ-1 ಜಿ.ಪಿ.ಎ ದಾಖಲೆಯನ್ನು ನನ್ನ ತಂದೆಯೇ ಮಾಡಿಸಿಕೊಟ್ಟಿರುತ್ತಾರೆ. ಜಿ.ಪಿ.ಎ ದಾಖಲೆ ಬಗ್ಗೆ ನಾನು ತಂದೆಯೊಂದಿಗೆ ಚರ್ಚಿಸಿದ್ದೇನೆ. ನಾನು ಭೈರವೇಶ್ವರ ಮೊಬೈಲ್ ಪಾಯಿಂಟ್ ನಡೆಸಲು ಪುರಸಭೆಯಿಂದ ಪರವಾನಿಗೆ ಪಡೆದಿಲ್ಲ. ಹಿಂದೆ ನಾನು ಮೆಡಿಕಲ್ ಶಾಪ್ ನಡೆಸುತ್ತಿದ್ದ ಬಗ್ಗೆ ಪುರಸಭೆಯಿಂದ ಪರವಾನಿಗೆ ಪಡೆದಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅದನ್ನು ನನ್ನ ತಂದೆ ಬರೆಸಿರುತ್ತಾರೆ. ನ್ಯಾಯಾಲಯಕ್ಕೆ ನಾನು ಮೆಡಿಕಲ್ ಶಾಪ್ ನ ಪರವಾನಿಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ರಾಜೇಗೌಡ ಸುಂಡೇಹಳ್ಳಿ ಗ್ರಾಮದ ನಂಜುಂಡೇಗೌಡರ ಮಗ ಎಂದರೆ ಸರಿ. ನನ್ನ ಸಂಬಂಧಿಕ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಸಾಕ್ಷಿಯಾಗಿ ವಿಚಾರಣೆ ಮಾಡಲು ತೊಂದರೆ ಇಲ್ಲ.

ಪ್ರಸ್ತುತ ದಾವೆ ಕೇಸಿನ ಡಿಕ್ರಿದಾರಕರು ಪುರಸಭೆ ಮತ್ತು ಅಧ್ಯಕ್ಷರು, ಮುಖ್ಯಾಧಿಕಾರಿ, ಕಾರ್ಯದರ್ಶಿ ಸುನಂದರವರ ವಿರುದ್ಧ ಹಕ್ಕು ಘೋಷಣೆ ಮತ್ತು ನಿರ್ದಿಷ್ಟ ಅನುದಾನ ಕೋರಿ ದಾವಾ ದಾಖಲಿಸಿದ್ದು, ಡಿಕ್ರಿ ದಾರಕರ ಪರವಾಗಿ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಡಿಕ್ರಿಧಾರಕರಿಗೆ ಪ್ರಸ್ತುತ ಜಾರಿ ಕೇಸಿನ ಮಳಿಗೆಯನ್ನು ಮೊದಲು ಹಂಚಿಕೆ ಮಾಡಿದ್ದು, ಸುನಂದ ಮತ್ತು ರಾಜೇಗೌಡರಿಗೆ ನಂತರ ಅಲಾಟ್ ಮಾಡಲಾಗಿದೆ ಇದು ಕಾನೂನು ಬಾಹಿರ ಎಂದು ನ್ಯಾಯಾಲಯ ಆದೇಶಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯ 28-03-2012 ರಲ್ಲಿ ಆದೇಶವಾದ 3 ತಿಂಗಳೊಳಗೆ ಡಿಕ್ರಿಧಾರಕರಿಗೆ ಸ್ವಾಧೀನಕೊಡಬೇಕೆಂದು ಪುರಸಭೆಯ ಅಧ್ಯಕ್ಷ ಮತ್ತು ಮುಖ್ಯಾಧಿಕಾರಿಗೆ ಆದೇಶ ಹೊರಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಹಿಂದೆ ರಾಜೇಗೌಡರು ಅ.ದಾ. 122/2002 ರಂತೆ ಜಯಂತಿ ದೇವಿ ಶರ್ಮ ಡಿಕ್ರಿಧಾರಕ ಮತ್ತು ಇನ್ನೋರ್ವ ಸುನಂದ ಎಂಬುವವರ ವಿರುದ್ಧ ದಾವೆ ದಾಖಲು ಮಾಡಿದ್ದ ವಿಚಾರ ನನಗೆ ಗೊತ್ತು. ಅದರ ತೀರ್ಪಿನ ಬಗ್ಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ರಾಜೇಗೌಡರಿಗೆ ಪ್ರಸ್ತುತ ಜಾರಿ ಕೇಸಿನ ಡಿಕ್ರಿಧಾರಕ ಮತ್ತು ಸುನಂದ ಎಂಬುವವರು ತಂಟೆ ತಕರಾರು ಮಾಡಬಾರದೆಂದು ನ್ಯಾಯಾಲಯ ಆದೇಶಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು

ಪ್ರಶ್ನಿಸಿ ಪ್ರಸ್ತುತ ಕೇಸಿನ ಡಿಕ್ರಿ ಧಾರಕ ಆರ್‌.ಎ. 52/2007 ರಲ್ಲಿ ತುರ್ತು ವಿಲೇವಾರಿ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದು ದಿಃ 05-10-2010 ರಲ್ಲಿ ಕೆಳ ನ್ಯಾಯಾಲಯದ ಆದೇಶವನ್ನು ರದ್ದು ಪಡಿಸಿ ಅಪೀಲನ್ನು ಪುರಸ್ಕರಿಸಿದ್ದರು ಎಂದರೆ ಗೊತ್ತಿಲ್ಲ.

ಸದರಿ ಮೇಲ್ಮನವಿಯಲ್ಲಿ ರಾಜೇಗೌಡರಿಗೆ ಆ ಸ್ವತ್ತಿನಲ್ಲಿ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದು ಆದೇಶಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅಪೀಲು ನ್ಯಾಯಾಲಯದ ಆದೇಶವನ್ನು ನಾನು ತಿಳಿದುಕೊಂಡಿದ್ದರೂ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ತೀರ್ಪಿನ ಬಗ್ಗೆ ರಾಜೇಗೌಡರಿಗೆ ಮಾಹಿತಿ ಇದ್ದು, ಜಿ.ಪಿ.ಎ ಬರೆದುಕೊಡುವ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ನನಗೆ ಸದರಿ ದಾಖಲೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯಂತೆ ಡಿಕ್ರಿ ಧಾರಕರು ಮಳಿಗೆ ಸ್ವಾಧೀನ ಪಡೆಯಲು ಬಂದಾಗ ನ್ಯಾಯಾಲಯದ ಆದೇಶವನ್ನು ನಾನು ಉಲ್ಲಂಘನೆ ಮಾಡಿ ಸ್ವಾಧೀನಕ್ಕೆ ಅಡ್ಡಿ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯ ಡಿಕ್ರಿ ಧಾರಕರಿಗೆ ಸ್ವಾಧೀನಕೊಡಿಸಲು ಆದೇಶಿಸಿದ್ದು , ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಸಂದೀಪ ಆಕ್ಷೇಪಣಧಾರರಾಗಿ ಪ್ರಸ್ತುತ ಜಾರಿ ಕೇಸಿನಲ್ಲಿ ತಕರಾರು ಮಾಡಿದ್ದೇವೆ ಎಂದರೆ ಸಾಕ್ಷಿಯು ನಾನು ಆಕ್ಷೇಪಣಧಾರನಾಗಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಷೆಡ್ಯೂಲ್ ಮಳಿಗೆಯಲ್ಲಿ ರಾಜೇಗೌಡರು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ರಾಜೇಗೌಡರಿಗೆ ನನಗೆ ಮತ್ತು ಸಂದೀಪನಿಗೆ ಷೆಡ್ಯೂಲ್ ಮಳಿಗೆಗೆ ಸಂಬಂಧಿಸಿದಂತೆ ಸಾಮಾನ್ಯ ಅಧಿಕಾರ ಪತ್ರ ಬರೆದುಕೊಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ ಪ್ರಸ್ತುತ ಜಾರಿ ಕೇಸಿನ ತೀರ್ಪುಋಣಿಗಳಾದ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳಿಗೆ ಅ.ದಾವಾದಲ್ಲಿ ನಡೆದ ವ್ಯವಹರಣೆ ಮತ್ತು ಡಿಕ್ರಿ, ಅಪೀಲು ನ್ಯಾಯಾಲಯದಲ್ಲಿ ನಡೆದ ವ್ಯವಹರಣೆ ಮತ್ತು ಡಿಕ್ರಿಯ ಎಲ್ಲಾ ಮಾಹಿತಿಗಳು ಇದ್ದರೂ ಸಹ ರಾಜೇಗೌಡ ಮತ್ತು ನಮ್ಮೊಂದಿಗೆ ಷರೀಕಾಗಿ ಡಿಕ್ರಿಧಾರರಿಗೆ ಷೆಡ್ಯೂಲ್ ಮಳಿಗೆ ಡಿಕ್ರಿಯಂತೆ ಧಕ್ಕಬಾರದೆಂದು ಕೆಲವೊಂದು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಷೆಡ್ಯೂಲ್ ಮಳಿಗೆಯಲ್ಲಿ ಮಹಾಲಕ್ಷ್ಮಿ ಮೆಡಿಕಲ್ ಸ್ಟೋರ್ ಮತ್ತು ಮಹಾಲಕ್ಷ್ಮಿ ದಿನಸಿ ಅಂಗಡಿ ನಡೆಯುತ್ತಿದೆ ಎಂದು ಪುರಸಭಾ ಮತ್ತು ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ದಾಖಲೆಗಳನ್ನು ಸೃಷ್ಟಿ

ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮನ್ನು ಷೆಡ್ಯೂಲ್ ಮಳಿಗೆಯಿಂದ ಖುಲ್ಲಾ ಮಾಡಿಸಿ ಡಿಕ್ರಿ ಧಾರಕರಿಗೆ ಸ್ವಾಧೀನಕೊಡುವಂತೆ ಆದೇಶಿಸಿ ವಾರೆಂಟ್ ಜಾರಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ವಾರೆಂಟ್ ಜಾರಿ ಮಾಡಲು ನ್ಯಾಯಾಲಯ ಸಿಬ್ಬಂದಿ ಬಂದಿದ್ದಾಗ ನಾನು ಖುಲ್ಲಾ ಮಾಡುವುದಿಲ್ಲವೆಂದು ನಿರಾಕರಿಸಿದ್ದೇನೆ ಎಂದರೆ ಸರಿಯಲ್ಲ. ಮಳಿಗೆಯಲ್ಲಿ ಮೆಡಿಕಲ್ ಶಾಪ್ ಇರುವುದರಿಂದ ಖುಲ್ಲಾ ಮಾಡಿಸಲು ಸಾಧ್ಯವಿಲ್ಲ ಎಂದು ವಾರೆಂಟ್ ನಲ್ಲಿ ಷರಾ ಬರೆಯಲಾಗಿದೆ ಎಂದರೆ ಸರಿಯಲ್ಲ. ರಾಜೇಗೌಡರಿಗಾಗಲೀ ನನಗಾಗಲೀ ಷೆಡ್ಯೂಲ್ ಮಳಿಗೆಯಲ್ಲಿ ಹಕ್ಕು ಭಾಧ್ಯತೆಗಳಿಲ್ಲ ಎಂದರೆ ಸರಿಯಲ್ಲ. ಪುರಸಭಾ ಅಧಿಕಾರಿಗಳೊಂದಿಗೆ ಷರೀಕಾಗಿ ಷೆಡ್ಯೂಲ್ ಮಳಿಗೆಯನ್ನು ಖುಲ್ಲಾ ಮಾಡಬೇಕಾಗುತ್ತದೆ ಎಂದು ನಿಡಿ-7 ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯವು ನಾನು ಷೆಡ್ಯೂಲ್ ಮಳಿಗೆಯನ್ನು ಖುಲ್ಲಾ ಮಾಡಬೇಕು ಎಂದು ಆದೇಶಿಸಿದರೆ ನಾನು ಖುಲ್ಲಾ ಮಾಡುತ್ತೇನೆ. 1992 ರಲ್ಲಿ ಷೆಡ್ಯೂಲ್ ಮಳಿಗೆಯನ್ನು ಡಿಕ್ರಿ ಧಾರಕರಿಗೆ ಹಂಚಿಕೆ ಮಾಡಿದ್ದು, ಪುರಸಭಾ ಅಧಿಕಾರಿಗಳೊಂದಿಗೆ ಷರೀಕಾಗಿ ನನ್ನ ತಂದೆ ಪುರಸಭಾ ಅಧ್ಯಕ್ಷರಾಗಿದ್ದಾಗ ಷೆಡ್ಯೂಲ್ ಮಳಿಗೆಯನ್ನು ಮೋಸದಿಂದ ರಾಜೇಗೌಡರಿಗೆ ಹಂಚಿಕೆ ಮಾಡಲಾಗಿದೆ ಎಂದರೆ ಸರಿಯಲ್ಲ. ರಾಜೇಗೌಡರಿಗೆ ಆಗಿದ್ದ ಹಂಚಿಕೆಯನ್ನು ನ್ಯಾಯಾಲಯ ರದ್ದು ಪಡಿಸಿ ಡಿಕ್ರಿ ಧಾರಕರ ಪರವಾಗಿ ಆದೇಶಿಸಿತ್ತು ಎಂದರೆ ಗೊತ್ತಿಲ್ಲ. ಡಿಕ್ರಿ ಧಾರಕರ ಪರವಾಗಿ ಷೆಡ್ಯೂಲ್ ಮಳಿಗೆಯ ಸ್ವಾಧೀನ ನೀಡಲು ಆದೇಶಿಸಿದ್ದು, ನನಗೆ ಸಂಪೂರ್ಣ ಮಾಹಿತಿ ಇದ್ದು ಉದ್ದೇಶಪೂರ್ವಕವಾಗಿ ಎಲ್ಲಾ ವಿಚಾರಗಳನ್ನು ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ನ್ಯಾಯಾಲಯಗಳ ಆದೇಶವನ್ನು ಪುರಸಭಾ ಅಧಿಕಾರಗಳೊಂದಿಗೆ ಷರೀಕಾಗಿ ನಾನು ಉಲ್ಲಂಘನೆ ಮಾಡಿದ್ದು, ಡಿಕ್ರಿ ಧಾರಕರಿಗೆ ನ್ಯಾಯಾಲಯದ ಡಿಕ್ರಿಯಂತೆ ಡಿಕ್ರಿಯ ಪ್ರತಿಫಲವನ್ನು ಹೊಂದಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಚನ್ನರಾಯಪಟ್ಟಣ